


‘ಏನೂ ಇಲ್ಲ ಮಾವಯ್ಯ. ಹನೂರಾಗ್ ಒಂದ್ ಅಂಗ್ಡಿ ಮಡಿಕುಂಡು ಬಿಸನೆಸ್ ಮಾಡುವ ಅಂತ, ನಮ್ಮನೇವ್ರು ಅದೆಲ್ಲ ಏನೂ ಬ್ಯಾಡ. ಅಪ್ಪಯ್ಯನ್ಗ ವಯ್ಸಾಯ್ತು ಇನ್ಮ್ಯಾಲ್ ನೀನ್ ಪೂಜಾರ್ಕೆ ನೋಡ್ಕಾ .ಅಂತ ಪ್ರಾಣ ತಿಂತವೆ, ನೀವೆ ಯೋಳಿ ಮಾವಯ್ಯ. ಎಸ್ಸೆಲ್ಸಿ ಮಾಡ್ಬುಟ್ಟು ನಾನೋಗ್ ಗಂಟೆ ಹಿಡ್ಕುಂಡ್ ನಿಂತ್ಕಂಡ್ರೆ ಜನ ನೋಡ್ಕಂಡು ನಗುದಿಲ್ವೆ, ಈ ಚಂದಕೆ ನಮ್ಮಪ್ಪಯ್ಯ ಅದ್ಯಾತ್ಗೆ ನನ್ನ ಓದುಸ್ಬೇಕಿತ್ತು. ಅದ್ರ್ ಬದ್ಲು ಪೂಜಾರ್ಕೆಗೆ ಹಾಕಿದ್ರೆ ಯಂಗೋ ಮಾಡ್ಕುಂಡ್ ಇರ್ತಿದ್ದೆ. ಈಗೋಗ್ ಗಂಟೆ ಹಿಡ್ಕ ಅಂದ್ರೆ ನಂಗ್ ಔಮಾನ ಆಗುದಿಲ್ವೆ ಮಾವಯ್ಯ ನೀವೆ ವಸಿ ಯೋಚ್ಸಿ. ನನ್ಕೈಲಿ ಆಗೂದಿಲ್ಲ ಮಾವಯ್ಯ ಅದೆಲ್ಲಾ’ ಎಂದು ಉದ್ಘಾರ ತೆಗೆದ.

ಸುಬ್ಬಣ್ಣನವರಿಗೆ ಇವನ ಮಾತುಗಳು ಕೆಂಡಾಮಂಡಲದಂತೆ ಕೋಪ ತರಿಸಿತ್ತು. ತಮ್ಮ ಬೀಗರ ಮನೆಯ ಪರಿಸ್ಥಿತಿಯನ್ನು ಚನ್ನಾಗೆ ತಿಳಿದಿದ್ದ ಸುಬ್ಬಣ್ಣನವರಿಗೆ ಮಾದೇಶನ ಮಾತುಗಳು ಪಿತ್ತ ನೆತ್ತಿಗೇರುವಂತೆ ಮಾಡಿದವು. ‘ಅಲ್ಲಾ ಕಣ್ಲಾ ಮಾತೆತ್ತುದ್ರೆ ಓದವ್ನಿ ಓದವ್ನಿ ಅಂದಾಯಲ್ಲ. ಏನ್ ಡಬಲ್ ಡಿಗ್ರಿ ಮಾಡಿದ್ದಾಯ್ಲಾ? ಎಸ್ಸೆಲ್ಸಿಲೂ ಮೂರ್ನೇ ಕಾಳಸ್ಲಿ ಪಾಸಾಗಿದ್ದಾಯಿ ನಿನಗ್ಯಾವ್ ದೊಣ್ಣೆ ಅಪ್ಪ